


ಬಹಳ ವಿಜೃಂಭಣೆಯಿಂದ ಮಾಡಿಕೊಟ್ಟರು. ಲೆಕ್ಚರರ್ ಧಾರವಾಡದಲ್ಲಿ ಮನೆ ಮಾಡಿ ನವಜೀವನ ಪ್ರಾರಂಭಿಸಿದನು.

ಲೆಕ್ಚರರ್ ಗೆಳೆಯ ತಾನು ಮೌಲ್ಯಮಾಪನ ಕೆಲಸಕ್ಕೆ ಹೋಗಬೇಕಾದ್ದರಿಂದ ಹೆಂಡತಿಯನ್ನು ವಿಜಯಪುರ ಬಸ್ಸು ಹತ್ತಿಸಿ ತಾನು ಬೆಂಗಳೂರು ಟ್ರೇನು ಹತ್ತಿದ. ಇಪ್ಪತ್ತು ದಿನಗಳ ಮೌಲ್ಯಮಾಪನ ಮುಗಿಸಿಕೊಂಡು, ಮೈಮನದಲ್ಲಿ ಹೆಂಡತಿಯನ್ನು ತುಂಬಿಕೊಂಡು ವಿಜಯಪುರ ಟ್ರೇನು ಹತ್ತಿದ. ಅಲ್ಲಿಂದ ಬಸ್ಸು ಹಿಡಿದು ಮಾವನೂರಿಗೆ ಬರುವುದರೊಳಗಾಗಿ ಇಳಿಹೊತ್ತಾಗಿತ್ತು. ಅವನು ಬರುವುದನ್ನು ಮನೆಯ ಹಜಾರದಲ್ಲಿ ಕುಳಿತಿದ್ದ ಮಾವ ದೂರದಿಂದ ನೋಡಿ ಬಾಗಿಲಿಗೆ ಬಂದು ಅಳಿಯನನ್ನು ಹೊರಗೇ ತಡೆದು ಹೊರಗೆ ನಿಲ್ಲಿಸಿ, "ಏನು ಅಳೇದೇವರೆ, ಯಾರ ಮರ್ಯಾದಿ ಕಳಿಬೇಕಂತ ಮಾಡೀರಿ! ನೀವು ಬರೂದನ್ನು ಮೊದಲೆ ತಿಳಿಸಿದ್ದರೆ ನಾವು ತಯಾರಿ ಮಾಡಕೋತಿದ್ವಿ. ಹೇಳಲಾರದೆ, ಕೇಳಲಾರದೆ ಬಿಡಾಡಿ ದನದ್ಹಾಂಗ ದಡಾಡಿಸಿ ಬಂದ್ರ ಹೆಂಗ?" ಎಂದು ಜಬರಿಸಿದಾಗ ನಮ್ಮ ಗೆಳೆಯ ಗಬರಾಯಿಸಿದ. ನಮ್ಮ ಭಾಗದವನಾದ ಅವನಿಗೆ ವಿಜಯಪುರದ ಸಂಪ್ರದಾಯವೇನು ಗೊತ್ತು? ತಾಬಡ ತೋಬಡ ಹಿರಿಯರನ್ನು ಕರೆಸಿ ಅಳಿಯನನ್ನು ಅಗಸಿಗೆ ಕಳಿಸಿದ. ಎಲ್ಲ ತಯಾರಿ ಮಾಡಿಕೊಂಡು, ಪಟಾಕಿ ಸಿಡಿಸುತ್ತ, ಊದಿಸುತ್ತ, ಬಾರಿಸುತ್ತ, ಊರ ತುಂಬ ಮೆರವಣಿಗೆ ಮಾಡಿ ಮನೆಗೆ ಬಂದು ಶಾಸ್ತ್ರ ಮುಗಿಸಿದರು. ಬಂದ ಹಿರಿಯರು ಬೇಗನೆ ಊಟ ಮಾಡಿ, "ಅಳಿಯದೇವರು ಬಾಳ ಹೈರಾಣು ಆಗ್ಯಾರು, ಹುರುಪಿನ್ಯಾಗೂ ಅದಾರು, ಜಲ್ದಿ ನಡಿರೆಪಾ" ಎನ್ನುತ್ತ ತಮ್ಮತಮ್ಮ ಮನೆಗೆ ನಡೆದರು. ಏಕಾಂತದಲ್ಲಿ ಹೆಂಡತಿಯನ್ನು ಕೇಳಿದಾಗ, "ನಮ್ಮಪ್ಪ ಊರ ಗೌಡ ಹಾನು. ಇಷ್ಟು ಮಾಡಲಿಲ್ಲಂದ್ರ ನಮ್ಮ ವತನಕಿಗೆ ಮರ್ಯಾದಿ ಇರತೈತಿ!" ಎಂದಳು.

ಸಂಪ್ರದಾಯಗಳನ್ನು ಕಾರಣವನ್ನಾಗಿ ಮಾಡಿಕೊಂಡು ಮನೆ ಹೊಕ್ಕುಕೊಳ್ಳಲು ತಾನು ತೆಗೆದುಕೊಂಡ ಚಾಜಿನ ಮೇಲೆ ಅಳಿಯನ ಘನತೆ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಬಸವನ ಬಾಗೇವಾಡಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ನನ್ನ ಗೆಳೆಯನ ಆಯಿ ತೀರಿಕೊಂಡಿದ್ದಳು. ಸಂಬಂಧಿಕರು, ಪರಿಚಿತರು ಕೂಡಿಕೊಂಡು ಮಣ್ಣಿಗೆ ಹೋಗಿದ್ದೆವು. ನಾವೆಲ್ಲರು ಅಜ್ಜಿಯ ಅಂತಿಮ ದರ್ಶನ ಮಾಡಿಕೊಂಡು ಹೊರಗೆ ಬಂದೆವು. ವಯಸ್ಸಾದ ಅವನ ಅಪ್ಪ ಮನೆಯೊಳಗೆ ಬಾರದೆ ಹೊರಗೆ ಕಟ್ಟೆಯ ಮೇಲೆ ಕುಳಿತಿದ್ದರು. ಇದನ್ನು ಗಮನಿಸಿದ ನಾನು ನಝುರ ಮಂದ ಆಗಿರಬೇಕೆಂದು, 'ಕಾಕಾ